LKA-201

**ದ್ವಿತೀಯ ಬಿ.ಎ. ತೆರೆದ ಪುಸ್ತಕ ಪರೀಕ್ಷೆ ಸೆಪ್ಟೆಂಬರ್/ಅಕ್ಟೋಬರ್– 2020**

**(ಹೊಸ ಪಠ್ಯಕ್ರಮ–SLM Scheme)**

**ಕನ್ನಡ ಭಾಷೆ : ಪತ್ರಿಕೆ–೨**

**ಸವಿಸ್ತರ ಮತ್ತು ಅವಿಸ್ತರ ಪಠ್ಯಗಳು**

**(ಪ್ರಾಚೀನ ಕನ್ನಡ ಕಾವ್ಯ, ಸಣ್ಣ ಕತೆಗಳು, ಗದ್ಯ ಸಂಪದ, ವಿಮರ್ಶೆ)**

**ಸಮಯ :** **ಗರಿಷ್ಠಾಂಕ : 80**

**ಸೂಚನೆ : ಎಲ್ಲಾ ಪ್ರಧಾನ ಪ್ರಶ್ನೆಗಳು ಕಡ್ಡಾಯ**

**ಎ – ವಿಭಾಗ**

**(ಪ್ರಾಚೀನಕನ್ನಡಕಾವ್ಯ :20 ಅಂಕಗಳು)**

1. **ಒಂದರ** ಭಾವವನ್ನು ಸಂದರ್ಭಸಹಿತ ವಿವರಿಸಿ : **1X5= 5**

   1. ಬಿನದಕ್ಕೆ ಪಾಡುತ್ತಿರೆ ನು
   ಣ್ದನಿ ನಿದ್ರೆಗೆ ಕತಕ ಬೀಜಮಾಯ್ತೆನೆ ಮೃಗಲೋ
   ಚನೆ ತಿಳಿದು ಆಲಿಸಿ ಮುಟ್ಟಿದ
   ಮನಮನೆ ತೊಟ್ಟನೆ ಪಸಾಯದಾನಂಗೊಟ್ಟಳ್.

   2. ಕೇಳಣ್ಣ ಚಕ್ರವ ಬಯಸಿತಿಲ್ಲ ಆನು ಶ
   ಸ್ತ್ರಾಲಯದೊಳು ತಾನೆ ಹುಟ್ಟಿ
   ಏಳಿಸಿ ನಾಡ ಸುತ್ತಿಸಿತು ನಿಮ್ಮೆಲ್ಲರ
   ಆಲಿಗೆ ನೋವಾಗುವಂತೆ

2. **ಹತ್ತು** ಪದಗಳಿಗೆ ಅರ್ಥ ಬರೆಯಿರಿ : **10 X ½= 5**

   ಅಟವಿ, ಸೂಳ್, ಬದಗಂ, ಅಲಂಪು, ಬೆಂತರ, ಹರಣ, ಬಾಳ್, ತಿಲ, ಅಂಬು, ಜಲಧಿ, ಮನಸಿಜ, ತುರಂಗ, ನನ್ನಿ, ಹದುಳ.

3. **ಎರಡರ** ಸಂದರ್ಭ ಸ್ವಾರಸ್ಯ ವಿವರಿಸಿ : **2 X 2 ½= 5**

   1. ಪಿರಿಯ ಸಿರಿಯೊಳೇಂ ಸುಜನತೆಯೋ
   2. ಎನಗೆ ಮಿಕ್ಕ ಗಂಡರ್ ಸಮಸೋದರರ್
   3. ಎಂದೆಂದೂ ಬಿಡದ ಬಾಳುವೆಗೆ ಕೊಟ್ಟರೆನ್ನ
   4. ಶಿಶುವು ನೀನೆಲೆ ಮಗನೆ ಕಾದುವರು ಅಸಮಬಲರು

4. **ಒಂದು** ವಿಷಯಕ್ಕೆಟಿಪ್ಪಣಿ ಬರೆಯಿರಿ : **1 X 5 = 5**
   1. ಧನುವನ್ನು ಕಳೆದುಕೊಂಡು ಅಭಿಮನ್ಯುಯುದ್ಧ ಮಾಡಿದ ಬಗೆ
   2. ಪ್ರಭುಲಿಂಗಲೀಲೆಯ ಮಹತ್ವ

**ಬಿ – ವಿಭಾಗ**

**(ಪ್ರಾಚೀನ ಕನ್ನಡಕಾವ್ಯ , ಸಣ್ಣಕಥೆಗಳು : 30 ಅಂಕಗಳು)**

5. **ಒಂದು**ಪ್ರಶ್ನೆಗೆಉತ್ತರ ಬರೆಯಿರಿ : **1 X 10= 10**
   1. ಅಕ್ಕಮಹಾದೇವಿಯ ವಚನಗಳ ವೈಶಿಷ್ಟ್ಯವನ್ನು ಚಿತ್ರಿಸಿ.
   2. ಕರ್ಣಪರ್ವದ ವಿಶೇಷತೆಯನ್ನು ನಿರೂಪಿಸಿ.

6. **ಎರಡು** ಪ್ರಶ್ನೆಗಳಿಗೆ ಉತ್ತರ ಬರೆಯಿರಿ : **2X 10 = 20**
   1. 'ಮನುವಿನ ರಾಣಿ' ಕಥೆಯ ಆಶಯವೇನು? ವಿಮರ್ಶಾತ್ಮಕವಾಗಿ ನಿರೂಪಿಸಿ.
   2. ಸಮಾಜದಲ್ಲಿನ ಮೇಲು–ಕೀಳು, ಬಡವ–ಬಲ್ಲಿದ ಎಂಬ ವರ್ಗ ತಾರತಮ್ಯವನ್ನು 'ಶವದ ಮನೆ' ಕತೆ ನಿವಾರಿಸುವಲ್ಲಿ ಯಶಸ್ವಿಯಾಗಿದೆಯೆ? ವಿಮರ್ಶಿಸಿ.
   3. ದೇವನೂರು ಮಹಾದೇವರು ಕಟ್ಟಿಕೊಡುವ ದಲಿತ ಲೋಕದ ಚಿತ್ರಣ ಕುರಿತು ಬರೆಯಿರಿ.
   4. 'ಕೃಷ್ಣೇಗೌಡನ ಆನೆ ಸಾಂಸ್ಕೃತಿಕ ಸಂದರ್ಭವೊಂದನ್ನು ಕಟ್ಟಿಕೊಡುವ ಕಥೆಯಾಗಿದೆ' ಈ ಹೇಳಿಕೆಯನ್ನು ವಿಮರ್ಶಿಸಿ.

ಸಿ– ವಿಭಾಗ

(ಗದ್ಯ ಸಂಪದ, ವಿಮರ್ಶೆ : 30 ಅಂಕಗಳು)

7. **ಒಂದು** ಪ್ರಶ್ನೆಗೆ ಉತ್ತರಿಸಿ : **1 X 10 = 10**
   1. 'ಬಾಳ್ವೆ ಸ್ವೀಕಾರಕ್ಕಿದೆ, ನಿರಾಕರಣೆಗಲ್ಲ' ಲೇಖನದ ಸ್ವರೂಪ ಮತ್ತು ವಿಶಿಷ್ಟತೆಯನ್ನು ಕುರಿತು ಬರೆಯಿರಿ.
   2. 'ವೈಚಾರಿಕ ಪ್ರಜ್ಞೆಗೆ ಅಡೆತಡೆಗಳು' ಲೇಖನದ ಒಳನೋಟಗಳನ್ನು ವಿವರಿಸಿ.

8. **ಒಂದು** ವಿಷಯಕ್ಕೆ ಟಿಪ್ಪಣಿ ಬರೆಯಿರಿ : **1 X 5 = 5**
   1. ಆಹಾರತತ್ತ್ವ ಮತ್ತು ಪರಿಸರ
   2. ರಾಷ್ಟ್ರೀಯತೆಯ ಸ್ವರೂಪ

9. **ಒಂದು** ಪ್ರಶ್ನೆಗೆ ಉತ್ತರಿಸಿ : **1 X 10 = 10**

1. 'ಪರಂಪರೆ ಮತ್ತು ರಾಘವಾಂಕನ ಪ್ರತಿಭೆ' ಲೇಖನದಲ್ಲಿ ವ್ಯಕ್ತವಾಗುವ ಅಭಿಪ್ರಾಯಗಳನ್ನು ಸಮೀಕ್ಷಿಸಿ.
2. 'ಸಾಹಿತ್ಯದಲ್ಲಿ ಬದ್ಧತೆ' ಲೇಖನದ ಸ್ವರೂಪ ಮತ್ತು ಮಹತ್ವವನ್ನು ಕುರಿತು ಬರೆಯಿರಿ.

10. **ಒಂದು** ವಿಷಯಕ್ಕೆ ಟಿಪ್ಪಣಿ ಬರೆಯಿರಿ : **1 X 5 = 5**

1. ಜಿ.ಎಚ್. ನಾಯಕರ ಬದುಕು – ಬರಹಗಳು
2. 'ಮಲೆಗಳಲ್ಲಿ ಮದುಮಗಳು' ಲೇಖನದ ವಿಶಿಷ್ಟತೆ.

********